**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 19.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

ನಾನು ಲೋಕೇಶ ಮತ್ತು ಸರಗೂರು ಪಟ್ಟಣ ಪಂಚಾಯಿತಿಯ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ತಿರುಗಾಡುವ ರಸ್ತೆ ಮತ್ತು ನಮ್ಮ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ಈ ದಾವೆ ಸಲ್ಲಿಸಿರುತ್ತೇನೆ. ತಿರುಗಾಡುವ ರಸ್ತೆ ಸಾರ್ವಜನಿಕ ರಸ್ತೆಯಾಗಿರುತ್ತದೆ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ಕಾಣುವ ನಾಡಹೆಂಚಿನ ಮನೆ 1 ನೇ ಪ್ರತಿವಾದಿಗೆ ಸೇರಿದ ಮನೆಯಾಗಿದ್ದು, ಸದರಿ ಮನೆಯ ಹಿಂಭಾಗದಲ್ಲಿ ಕೆಂಪು ಬಣ್ಣ ಸಿಂಪಡಿಸಿರುವ ಆರ್.ಸಿ.ಸಿ. ಕಟ್ಟದ ಮನೆ ನಮಗೆ ಸೇರಿದ ಮನೆಯಾಗಿರುತ್ತದೆ. ಸಾಕ್ಷಿಯು ಭಾವಚಿತ್ರಗಳಲ್ಲಿ ಕಾಣುವ ಮನೆಗಳನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ **ನಿ.ಡಿ.-1** ಮತ್ತು **ನಿ.ಡಿ.-2** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ಕಾಣುವ ನಮ್ಮ ಮನೆಯ ಎದುರುಗಡೆ ಇರುವ 02 ಅಂತಸ್ತಿನ ಮನೆ ದಾಸೇಗೌಡರ ಮನೆಯಾಗಿರುತ್ತದೆ. ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ಕಾಣುವ ಮನೆಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿ.ಡಿ.-3** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ರಸ್ತೆಯ ಪಕ್ಕ ಮನೆ ಕಟ್ಟಲು ತಳಪಾಯ ಹಾಕಿದ್ದು, ಅದರ ಪಕ್ಕದಲ್ಲಿಯೇ ಚರಂಡಿ ನಿರ್ಮಿಸಿರುತ್ತಾರೆಂದರೆ ಸರಿ. ಸಾಕ್ಷಿಯು ಭಾವಚಿತ್ರದಲ್ಲಿ ಕಾಣುವ ಚರಂಡಿಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿ.ಡಿ.-4** ಎಂದು ಗುರುತಿಸಲಾಯಿತು. ನಿ.ಡಿ.-1 ರಿಂದ ನಿ.ಡಿ.-4 ರಲ್ಲಿ ಕಾಣುವಂತೆ ನಮ್ಮ ಮನೆಗೆ ಹೋಗಲು ಯಾವುದೇ ರಸ್ತೆಯ ಕುರುಹುಗಳಿರುವುದಿಲ್ಲವೆಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ

ಹೇಳಿಕೆಯ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಿ.ಡಿ.-1 ರಲ್ಲಿ ಕಾಣುವ ಕಾಂಕ್ರೀಟ್ ರಸ್ತೆ ಸಾರ್ವಜನಿಕ ರಸ್ತೆಯಾಗಿರುತ್ತದೆಂದರೆ ಸರಿ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ನಮ್ಮ ಮನೆಗೆ ಹೋಗಲು ಯಾವುದೇ ರಸ್ತೆ ಇರುವುದಿಲ್ಲವೆಂದರೆ 1 ನೇ ಪ್ರತಿವಾದಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ತಳಪಾಯ ಹಾಕಿರುವ ಜಾಗವೇ ನಮ್ಮ ಮನೆಗೆ ತಿರುಗಾಡುವ ರಸ್ತೆಯಾಗಿರುತ್ತದೆ. ಸಾಕ್ಷಿಯು ಭಾವಚಿತ್ರದಲ್ಲಿ ಕಾಣುವ ತಳಪಾಯವನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿ.ಡಿ.-5** ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ಕಾಣುವ ನಾಡಹೆಂಚಿನ ಮನೆ ನಮ್ಮ ಮನೆಯ ಪಶ್ಚಿಮ ದಿಕ್ಕಿಗಿರುವ ಮನೆಯಾಗಿರುತ್ತದೆ. ಸಾಕ್ಷಿಯು ಭಾವಚಿತ್ರದಲ್ಲಿ ಕಾಣುವ ನಾಡಹೆಂಚಿನ ಮನೆಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿ.ಡಿ.-6** ಎಂದು ಗುರುತಿಸಲಾಯಿತು. ನಿ.ಡಿ.-6 ರಲ್ಲಿ ಕಾಣುವ ಮನೆಯನ್ನು ಹೊಡೆದು 1 ನೇ ಪ್ರತಿವಾದಿ ನಿ.ಡಿ.-5 ರಲ್ಲಿ ಕಾಣುವ ತಳಪಾಯ ಹಾಕಿರುತ್ತಾರೆಂದರೆ ರಸ್ತೆಯನ್ನು ಸೇರಿಸಿ ತಳಪಾಯ ಹಾಕಿಕೊಂಡಿರುತ್ತಾರೆ. ವಾದಪತ್ರದಲ್ಲಿ ನಮೂದಿಸಿರುವಂತಹ ಬಿ ತಪಶೀಲು ಸ್ವತ್ತು ಅಸ್ತಿತ್ವದಲ್ಲಿಲ್ಲವೆಂದರೆ ಸರಿಯಲ್ಲ. ನನ್ನ ವಾದಪತ್ರದ ಖಂಡಿಕೆ-6 ರಲ್ಲಿ ಹೇಳಿರುವಂತೆ 2 ನೇ ಪ್ರತಿವಾದಿ ಯಾವುದೇ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಿರುವುದಿಲ್ಲವೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 11 ಅಡಿ ಉದ್ದ ಮತ್ತು 16 ಅಡಿ ಅಗಲದ ಮನೆ ಇತ್ತು. 2 ನೇ ಪ್ರತಿವಾದಿಯ ಕಛೇರಿಯ ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿಗೆ 24 ಅಡಿ ಉದ್ದ ಮತ್ತು 15 ಅಡಿ ಅಗಲದ ಜಾಗವಿದ್ದು, ಅದರಲ್ಲಿ ಮಣ್ಣಿನ ಗೋಡೆ ಮತ್ತು ನಾಡಹೆಂಚಿನ ಮನೆ ನಿರ್ಮಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. 03 ವರ್ಷಗಳ ಹಿಂದೆ ಹೆಚ್ಚು ಮಳೆ ಬಂದು 1 ನೇ ಪ್ರತಿವಾದಿಯ ಮನೆಯ ಗೋಡೆ ಬಿದ್ದು ಹೋಗುವ ಸ್ಥಿತಿಯಲ್ಲಿದ್ದುದರಿಂದ

ಸರಗೂರು ಪಟ್ಟಣ ಪಂಚಾಯಿತಿ ವತಿಯಿಂದ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಯೋಜನೆಯಡಿಯಲ್ಲಿ ಹೊಸ ಮನೆ ನಿರ್ಮಿಸಲು ಪರವಾನಗಿ ಕೊಟ್ಟಿರುತ್ತಾರೆಂದರೆ ಸರಿ ಆದರೆ ನಂತರ ಅದು ರದ್ದಾಗಿರುತ್ತದೆ. ನಾನು ಹೇಳಿದಂತೆ 1 ನೇ ಪ್ರತಿವಾದಿಗೆ ಅನುಮತಿ ನೀಡಿದ ಯೋಜನೆ ರದ್ದಾಗಿರುವುದಿಲ್ಲ, ಸದರಿ ಯೋಜನೆಯಂತೆ 1 ನೇ ಪ್ರತಿವಾದಿ ಮನೆ ನಿರ್ಮಿಸಲು ತಳಪಾಯ ಹಾಕಿರುತ್ತಾರೆ ಮತ್ತು ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲವೆಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಹೇಳಿರುವಂತಹ ರಸ್ತೆ ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಕಟ್ಟಡ ಕಟ್ಟಲು ಅನುಮತಿ ನೀಡಿರುತ್ತಾರೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಕೇಳಿರುವಂತಹ ರಸ್ತೆ ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಅನುಭೋಗದ ಹಕ್ಕನ್ನು ಕೇಳಲು ನನಗೆ ಯಾವುದೇ ಅಧಿಕಾರವಿರುವುದಿಲ್ಲವೆಂದರೆ ಸರಿಯಲ್ಲ.

**ಮರು-ವಿಚಾರಣೆಃ ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**